(ಇಂದು ದಿನಾಂಕಃ 12-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಎಸ ವಕೀಲರಿಂದ ಃ**

1. ಅಮಿತಸಿಂಗ ಚಿಂಚೋಳಿಯವರು ಎಂದರೆ ಸರಿ. ಅಮಿತಸಿಂಗ ತಾಯಿಯ ಹೆಸರು ರೇಖಾ ಇರುತ್ತದೆ. ಕಲಾವತಿ ಗಂಡ ರಾಜೇಂದ್ರ ಪ್ರಸಾದ ತಿವಾರಿ ಯಾರು ಎಂದರೆ ಸಾಕ್ಷಿ ಅಮಿತಸಿಂಗರವರ ಅಜ್ಜಿ ಇರುತ್ತಾರೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಕಲಾವತಿ ಗಂಡ ರಾಜೇಂದ್ರ ಪ್ರಸಾದ ತಿವಾರಿರವರನ್ನು ಯಾಕೆ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸಾಕ್ಷಿ ಅಮಿತಸಿಂಗ ಸಣ್ಣವರಿದ್ದಾಗಿನಿಂದ ಅವರನ್ನು ಬೆಳೆಸಿರುತ್ತಾರೆ ಆದ್ದರಿಂದ ಕಲಾವತಿ ಗಂಡ ರಾಜೇಂದ್ರ ಪ್ರಸಾದ ತಿವಾರಿರವರನ್ನು ಯಾಕೆ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಅಮಿತಸಿಂಗರವರ ತಾಯಿ ಬದುಕಿದ್ದಾರೆ. ಸಾಕ್ಷಿ ಮುಂದುವರೆದು ಅವರು ಬೇರೆ ಮದುವೆ ಮಾಡಿಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಅಮಿತಸಿಂಗರವರ ತಂದೆ ತೀರಿಕೊಂಡು 35 ವರ್ಷ ಆಗಿರುತ್ತದೆ. ಅಮಿತಸಿಂಗರವರ ತಂದೆಗೆ ಎಷ್ಟು ಜನ ಅಣ್ಣ-ತಮ್ಮಂದಿರು ಮತ್ತು ಅಕ್ಕ-ತಂಗಿಯರು ಎಂದರೆ ಸಾಕ್ಷಿ 3 ಜನ ಅಣ್ಣ ತಮ್ಮಂದಿರು ಮತ್ತು 7 ಜನ ಅಕ್ಕ-ತಂಗಿಯರು ಇರುತ್ತಾರೆ ಎಂದು ಹೇಳುತ್ತಾರೆ.

2. ಈ ದಾವೆಯಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ಅಮಿತಸಿಂಗರವರಿಗೆ ಹೇಗೆ ಬಂದಿದೆ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಅವರಿಗೆ ದಾನ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಯಾರು ಅಮಿತಸಿಂಗರವರಿಗೆ ದಾನ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಹೀರಾಸಿಂಗರವರು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಹೀರಾಸಿಂಗರವರಿಗೆ ದಾವಾ ಆಸ್ತಿಗಳು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಈ ದಾವಾ

ಆಸ್ತಿಯ ಮೂಲ ಮಾಲಿಕರು ಯಾರು ಎಂದು ನನಗೆ ಗೊತ್ತಿಲ್ಲ. ಅಮಿತಸಿಂಗರವರ ತಂದೆಯವರ ತಾಯಿಯ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ಅಮಿತಸಿಂಗರವರ ತಂದೆಯವರ ತಂದೆ-ತಾಯಿಯ ಹೆಸರು ಶೇಶುಬಾಯಿ ಮತ್ತು ಹೀರಾಸಿಂಗ ಇತ್ತು ಎಂದರೆ ಸರಿ. ದಾವಾ ಜಮೀನಿನ ಮೊದಲ ಮಾಲಿಕರು ಶೇಶುಸಿಂಗ ತಂದೆ ಬಿಕ್ಕುಸಿಂಗ ಇದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಶೇಶುಸಿಂಗ ತಂದೆ ಬಿಕ್ಕುಸಿಂಗರವರಿಂದ ಹೀರಾಸಿಂಗರವರು ದಾವಾ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶೇಶುಸಿಂಗ ತಂದೆ ಬಿಕ್ಕುಸಿಂಗರವರಿಂದ ಹೀರಾಸಿಂಗರವರು ದಾವಾ ಜಮೀನನ್ನು ಖರೀದಿ ಮಾಡಿದ್ದರಿಂದ ದಾವಾ ಜಮೀನು ಹೀರಾಸಿಂಗರವರ ಸ್ವಯಾರ್ಜಿತ ಆಸ್ತಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹೀರಾಸಿಂಗರವರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಹೀರಾಸಿಂಗರವರು ದಾವಾ ಜಮೀನನ್ನು ತನ್ನ ಮೊಮ್ಮಗನಾದ ಅಮಿತಸಿಂಗರವರಿಗೆ ನೊಂದಾಯಿತ ದಾನ ಪತ್ರದ ಮುಖಾಂತ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ನೊಂದಾಯಿತ ದಾನ ಪತ್ರದ ಸಂಖ್ಯೆ 812/2004-2005 ದಿಃ30-10-2004 ಇರುತ್ತದೆ ಎಂದರೆ ಸರಿ. ಆ ನೊಂದಾಯಿತ ದಾನ ಪತ್ರದ ಸಂಖ್ಯೆ 812/2004-2005 ದಿಃ30-10-2004 ಮಾಡಿಕೊಡುವ ಸಮಯದಲ್ಲಿ ಅಮಿತಸಿಂಗ ಅಪ್ರಾಪ್ತ ವಯಸ್ಸಿನವರಾಗಿದ್ದರಿಂದ ಅವನ ಸಂರಕ್ಷದಾರನಾಗಿ ಎರಡನೇ ಪ್ರತಿವಾದಿಗೆ ಮಾಡಲಾಯಿತು ಎಂದರೆ ಸರಿ.

3. ಈ ದಾವಾ ಜಮೀನಿಗೆ ಸಂಬಂಧ ಪಟ್ಟಂತೆ ಇದೆ ನ್ಯಾಯಾಲಯದಲ್ಲಿ ಎರಡು ದಾವೆಗಳು ನಡೆದಿರುತ್ತವೆ ಎಂದರೆ ಸರಿ. ಆ ದಾವೆಗಳು ಮೂಲ ದಾವೆ ಸಂಖ್ಯೆ 29/2012 ಇತ್ತು ಎಂದರೆ ಸರಿ. ಆ ದಾವೆಯನ್ನು ರವಿಯವರು ಅಮಿತಸಿಂಗರವರ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 21/2013 ಪ್ರತಾಪಸಿಂಗರವರು ಅಮಿತಸಿಂಗರವರ ವಿರುದ್ಧ ಸಲ್ಲಿಸಿದ್ದರು ಎಂದರೆ

ಸರಿ. ಮೂಲ ದಾವೆ ಸಂಖ್ಯೆ 29/2012 ರಲ್ಲಿ ರವಿಯವರು ಮೃತ್ಯುಪತ್ರದ ಆಧಾರದ ಮೇಲೆ ಮಾಲಿಕತ್ವದ ಘೋಷಣೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ವಿಲ್‌ಅನ್ನು ರದ್ದು ಮಾಡಲಾಯಿತು ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವೆ ಸಂಖ್ಯೆ 29/2012 ವಜಾ ಆಯಿತು ಎಂದರೆ ಸರಿ. ಮೂಲ ದಾವೆ ಸಂಖ್ಯೆ 29/2012 ತೀರ್ಪಿನ ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಆ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ.

4. ಅಮಿತಸಿಂಗರವರ ದೊಡ್ಡಪ್ಪ ಪ್ರತಾಪ ಸಿಂಗರವರು ಇದೆ ದಾವಾ ಆಸ್ತಿಯ ಮೇಲೆ ಪಾಲು ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಪ್ರತಾಪ ಸಿಂಗರವರು ಹಿರಿಯರ ಆಸ್ತಿ ಅಲ್ಲ ಜಂಟಿ ಕುಟುಂಬದಿಂದ ಖರೀದಿ ಮಾಡಿರುವ ಆಸ್ತಿ ಇರುತ್ತದೆ ಎಂದು ತಮ್ಮ ದಾವೆಯಲ್ಲಿ ಬರೆಸಿದ್ದರು ಎಂದರೆ ಸಾಕ್ಷಿ ಅದು ಸುಳ್ಳು ಇದೆ ಎಂದು ಹೇಳುತ್ತಾರೆ. ಪ್ರತಾಪ ಸಿಂಗರ, ಪ್ರಿತ್ವಿರಾಜ ಸಿಂಗ ಮತ್ತು ಹಣಮಾನ ಸಿಂಗ 3 ಜನ ಅಣ್ಣ ತಮ್ಮಂದಿರು, ಪ್ರಿತ್ವಿರಾಜ ಸಿಂಗ ದತ್ತು ಹೋಗಿದ್ದರಿಂದ ದಾವಾ ಆಸ್ತಿಯಲ್ಲಿ ಪ್ರತಾಪಸಿಂಗ ಮತ್ತು ಹಣಮಾನಸಿಂಗರವರಿಗೆ ಪಾಲು ಬರಬೇಕು ಎಂದು ಪ್ರತಾಪ ಸಿಂಗರವರು ತಮ್ಮ ದಾವೆಯಲ್ಲಿ ಬರೆಸಿದ್ದರು ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ಮೂಲ ದಾವೆ ಸಂಖ್ಯೆ 29/2012 ರಲ್ಲಿ ಮತ್ತು ಅಸಲು ದಾವೆ ಸಂಖ್ಯೆ 21/2013 ರಲ್ಲಿ ಅಮಿತಸಿಂಗರವರು ದಾವಾ ಜಮೀನು ತಮ್ಮ ಅಜ್ಜ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ತಮ್ಮ ಜವಾಬ ಸಲ್ಲಿಸಿದ್ದರು ಎಂದರೆ ಸರಿ. ಅಮಿತಸಿಂಗರವರು ದಾವಾ ಜಮೀನು ತಮ್ಮ ಅಜ್ಜ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ತಮ್ಮ ಜವಾಬ ಸಲ್ಲಿಸಿದ್ದರಿಂದ ಆ ಎರಡು ದಾವೆಗಳು ವಜಾ ಆಗಿದ್ದು ಮತ್ತು ಮೇಲ್ಮನವಿ ಕೂಡ ವಜಾ ಆಗಿದೆ ಎಂದರೆ ಸರಿ.

5. ದಾವಾ ಮನೆ ಖರೀದಿ ಮಾಡಿರುವ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅಮಿತಸಿಂಗರವರ ಅಜ್ಜ ಹೀರಾಸಿಂಗ ರವರು ಬೀದರ ತಾಲ್ಲೂಕೀನ ರೇಕುಳಹಿ ಗ್ರಾಮದವರು ಎಂದರೆ ಸರಿ. ಹೀರಾಸಿಂಗ ಚಿಂಚೋಳಿಗೆ ಬಂದ ನಂತರ ದಾವ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ಅಮಿತಸಿಂಗರವರಿಗೆ ದಾವಾ ಜಮೀನು ದಾನ ಪತ್ರದ ಮೂಲಕ ಬಂದಿದ್ದರಿಂದ, ಅಮಿತಸಿಂಗರವರು ಮೊನಪ್ಪ ಎಂಬುವವರಿಗೆ ದಾವಾ ಜಮೀನಿನ ಮೇಲೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಮೊನಪ್ಪರವರು ಅದರ ಬಗ್ಗೆ ದಾವೆ ಸಲ್ಲಿಸಿದ್ದು ಆ ದಾವೆ ಡಿಕ್ರಿ ಅಗಿದೆ ಎಂದರೆ ಸರಿ. ಅದರ ಬಗ್ಗೆ ಅಮಲಜಾರಿ ಅರ್ಜಿ ಸಲ್ಲಿಸಿದ್ದು ಅದು ಇದೆ ನ್ಯಾಯಾಲಯದಲ್ಲಿ ಚಲ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಅಲ್ಲ, ಅದು ಅಮಿತಸಿಂಗರವರ ಸ್ವಂತ ಆಸ್ತಿ ಆಗಿದ್ದರಿಂದ ನನಗೆ ಈ ದಾವಾ ಆಸ್ತಿಯಲ್ಲಿ ಪಾಲು ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.